ಕಾಲೇಜು ಸೇರಿದ್ದರಿಂದ ಖಾಸಿಂ ಸಾಬರಿಗೆ ನಮ್ಮೂರವರು ಅದೂ ತನಗೆ ತುಂಬಾ ಬೇಕಾದವರ ಮಗ ಅನ್ನುವ ಸಮಾಧಾನದಲ್ಲಿದ್ದರು. ಆದರೆ, ಅವರಿಬ್ಬರ ಬಗ್ಗೆ ಅವರಿವರು ಮಾತಾಡಿಕೊಳ್ಳತೊಡಗಿದಾಗ ಮಗಳ ಬಗ್ಗೆ ಇದ್ದ ನಂಬಿಕೆ ಖಾಸಿಂ ಸಾಬರನ್ನು ಆ ಬಗ್ಗೆ ಅಷ್ಟು ತಲೆಕೆಡಿಸಿಕೊಳ್ಳದಂತೆ ಮಾಡಿತ್ತು. ಈ ಕಾರಣಕ್ಕೆ ಹೆಂಡತಿ ಕೆಲವು ದಿನಗಳ ಹಿಂದೆ ಅವಳು ಓದಿದ್ದು ಸಾಕು ಮನೆಗೆ ಕರಕಂಡು ಬನ್ನಿ ಅಂತ ದುಂಬಾಲು ಬಿದ್ದಿದ್ದಳು. ಶಂಭುಲಿಂಗನ ಓದು ಮುಗಿದಿದ್ದರೂ ಆಗಾಗ ಪಟ್ಟಣಕ್ಕೆ ಹೋಗುತ್ತಿದ್ದದ್ದು ಆಗವನು ಮಗಳ ಜೊತೆ ಇರುತ್ತಿದ್ದದ್ದನ್ನು ಕಂಡವರು ಖಾಸಿಂ ಸಾಬರ ಕಿವಿಯೂದಿದ್ದರು. ಖಾಸಿಂ ಸಾಬರದಕ್ಕೆ ಕವಡೆ ಕಾಸಿನ ಕಿಮ್ಮತ್ತು ಕೊಟ್ಟಿರಲಿಲ್ಲ.

ಆದರೆ, ಆವತ್ತೊಂದು ದಿನ ಹುಡುಸ್ಲೇಗೌಡನ ಮಗ ವೀರಭದ್ರನ ಸಂಘದವರು ಖಾಸಿಂ ಸಾಬರನ್ನು ನಿಲಾಕಿಕೊಂಡು ಆಡಿದ್ದ ಮಾತುಗಳು ಆ ಚಣ ಖಾಸಿಂ ಸಾಬರಿಗೆ ಯಾವುದೋ ಯಡವಟ್ಟಿನ ಸೂಚನೆಯಂತೆ ಕಂಡರೂ ಮರು ಚಣವೇ ಊರವರ ಕೂಡೆ ಇದ್ದ ಒಡನಾಟ ಅಂಥ ಯೋಚನೆಯನ್ನು ನಿಲಾಕಿತ್ತು. ಆವತ್ತು ಖಾಸಿಂ ಸಾಬರು ಕಲಾಯಿ ಕಸುಬಿಗೆಂದು ಹೋದವರು ತಿರುಗಿ ಬರುವಾಗ ಕತ್ತಲಾಗಿಹೋಗಿತ್ತು. ಇನ್ನೇನು ಊರು ಹತ್ತಿರ ಬಂತು ಅನ್ನುವಷ್ಟರಲ್ಲಿ ದಿಢೀರನೆ ಹುಡುಗರ ಗುಂಪೊಂದು ಅವರನ್ನು ಅಡ್ಡಗಟ್ಟಿ, ‘ಲೇ ಸಾಬಿ ಯಾಕೋ ನಿಮ್ ಜನ್ದಾಗೆ ಗಂಡುಸ್ರೇ ಇಲ್ವಾ? ನಮ್ಮವ್ನೇ ಬೇಕಾ ನಿನ್ ಮಗ್ಳಿಗೆ? ನಿಮ್ ಹುನ್ನಾರ ಏನೂ ಅಂತ ಗೊತ್ತೈಯ್ತೆ ನಮ್ಗೆ.

